# ಸ್ಪೈಡರ್‌ಮ್ಯಾನ್ ಹಲ್ಲಿ..!



ಕೆಂಪು ನೀಲಿ ಬಣ್ಣದ ಸೂಟ್ ನಲ್ಲಿ ಬಲೆಗಳನ್ನು ಹೆಣೆದು ಹಾರುತ್ತಾ ಸಾಹಸ ತೋರುವ ಕಾಮಿಕ್ ಪುಸ್ತಕದ ಹೀರೊ ಸ್ಪೈಡರ್‌ಮ್ಯಾನ್ ಯಾರಿಗೆ ಗೊತ್ತಿಲ್ಲ ಹೇಳಿ? ಥೇಟ್ ಸ್ಪೈಡರ್‌ಮ್ಯಾನ್‌ನನ್ನೇ ಹೋಲುವ ಸರೀಸೃಪವು ತಾಂಜೇನಿಯಾ, ರುವಾಂಡ ಮತ್ತು ಕೀನ್ಯದಲ್ಲಿ ಕಂಡುಬರುತ್ತವೆ. ಮ್ವಾಂಜಾ ಫ್ಲಾಟ್ ಹೆಡೆಡ್ ಅಗಾಮಾ ಎನ್ನುವ ಹಲ್ಲಿಯ ತಲೆ, ಕುತ್ತಿಗೆ ಮತ್ತು ಭುಜಗಳು ಗಾಢ ನೇರಳೆ ಅಥವಾ ಕೆಂಪು ಎರಡರಲ್ಲಿ ಒಂದು ಬಣ್ಣವನ್ನು ಮತ್ತು ಉಳಿದ ದೇಹವು ದಟ್ಟ ನೀಲಿ ಬಣ್ಣವನ್ನು ಹೊಂದಿರುತ್ತದೆ. ಈ ವರ್ಣ ಸಂಯೋಜನೆಯು ಗಂಡು ಜಾತಿಯ ಹಲ್ಲಿಗಳಿಗೆ ಮಾತ್ರ ಸೀಮಿತ. ಅಗಾಮಾ ಜಾತಿಯ ಹೆಣ್ಣು ಹಲ್ಲಿಗಳು ಪೇಲವ ಕಂದು ಬಣ್ಣದಲ್ಲಿರುತ್ತವೆ. (ಅಷ್ಟಕ್ಕೂ ಸ್ಪೈಡರ್ ವುಮೆನ್ ಇಲ್ಲವಲ್ಲ!)

ಸ್ಪೈಡರ್ ಮ್ಯಾನ್ ಹಲ್ಲಿಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದು ಕ್ಯಾಸಿಯೋ ಲೋಪ್ಸ್. ಬ್ರೆಜಿಲ್ ದೇಶದ ಸಾವೋ ಪಾಲೋ ಎಂಬಲ್ಲಿಯ ಈ ಛಾಯಾಗ್ರಾಹಕ ತನ್ನ ಪತ್ನಿ ಅಲೆಗ್ಸಾಂಡ್ರಾಳ ಜೊತೆ ಕೀನ್ಯ ದೇಶಕ್ಕೆ ಪ್ರವಾಸ ಕೈಗೊಂಡಿದ್ದಾಗ, ಬಂಡೆಯ ಮೇಲೆ ಬಿಸಿಲು ಕಾಯಿಸುತ್ತಾ ಕುಳಿತಿದ್ದ ಈ ಹಲ್ಲಿಯ ಛಾಯಾಚಿತ್ರವನ್ನು ತೆಗೆದನಂತೆ. ಇದಾದ ನಂತರ ಈ ಹಲ್ಲಿಯ ಬೇಡಿಕೆ ಬಹಳ ಹೆಚ್ಚಾಯಿತಂತೆ. ಪ್ರಾಣಿ ಪ್ರಿಯರು ಹಾಗೂ ಸ್ಪೈಡರ್ ಮ್ಯಾನ್ ಅಭಿಮಾನಿಗಳು ತಾರಾಪಟ್ಟ ಗಿಟ್ಟಿಸಿಕೊಂಡ ವಿಲಕ್ಷಣ ಹಲ್ಲಿಯನ್ನು ಸಾಕಲು ಮುಗಿಬಿದ್ದರಂತೆ.

ನಿಯಮಿತವಾಗಿ ನಿರ್ವಹಣೆ ಮಾಡಿದರೆ ಮಾತ್ರ, ಪಳಗಿಸಬಹುದಾದ ಅಗಾಮಾ ಹಲ್ಲಿಗಳನ್ನು ಸಾಕಬಹುದು. ಆದರೂ ಯುನೈಟೆಡ್ ಕಿಂಗ್‌ಡಮ್ ನಲ್ಲಿ ಅವುಗಳ ಉಷ್ಣತೆಯನ್ನು ನಿರ್ವಹಿಸಲು ವಿಶೇಷ ಉಪಕರಣ ಅವಶ್ಯಕ. ಪ್ರಾಪ್ತ ವಯಸ್ಸಿನ ಮ್ವಾಂಜಾ ಫ್ಲಾಟ್ ಹೆಡೆಡ್ ಅಗಾಮಾ ಹಲ್ಲಿಗಳು ಒಂದು ಅಡಿಯಷ್ಟು ಉದ್ದ ಬೆಳೆಯಬಲ್ಲವು.

■ ವಿದ್ಯಾ ವಿ. ಹಾಲಭಾವಿ



